ಸಾಕ್ಷಿಯನ್ನು ದಿ: 28.03.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ಎಂ.ಎಸ್ಸಿ ಗಣಿತಶಾಸ್ತ್ರ ಪದವಿ ಪಡೆದಿರುತ್ತೇನೆ. ನಾನು ನಿವೃತ್ತ ಉಪನ್ಯಾಸಕನಾಗಿರುತ್ತೇನೆ. ನನ್ನ ವಾದ ಪತ್ರದ ಸಂಗತಿಗಳು ಗೊತ್ತಿರುತ್ತವೆ. ನನ್ನ ತಿದ್ದುಪಡಿ ವಾದಪತ್ರದಲ್ಲಿಯೂ ಸಹ ಮೂಲ ವಾದಪತ್ರದ ಅಂಶಗಳನ್ನೇ ಬರೆಸಿರುತ್ತೇನೆ. ನನ್ನ ತಿದ್ದುಪಡಿ ವಾದಪತ್ರದಲ್ಲಿ ನಾನು ಮೂಲ ವಾದಪತ್ರದ ಸಂಗತಿಗಳನ್ನು ಕೈಬಿಟ್ಟು ಸಲ್ಲಿಸಿರುತ್ತೇನೆಂದರೆ ನೆನಪಿಲ್ಲ. ನಾನು ನಮ್ಮ ಕುಟುಂಬದ ವಂಶವೃಕ್ಷ ಹಾಜರು ಪಡಿಸಿರುತ್ತೇನೆ. ನನ್ನ ತಾತನ ಹೆಸರು ಮಂಗೇಗೌಡ ಉಃ ಲಿಂಗೇಗೌಡ. ನನ್ನ ತಾತನಿಗೆ ಏಳು ಜನ ಮಕ್ಕಳಿರುತ್ತಾರೆ ಅವರೆಂದರೆ ಎತ್ತೇಗೌಡ ಉಃ ಲಿಂಗೇಗೌಡ, ದೊಡ್ಡಮಾದೇಗೌಡ, ನನ್ನ ತಂದೆ ಹನುಮೇಗೌಡ, ಕೆಂಪೇಗೌಡ, ಚಿಕ್ಕಣ್ಣ ಹಾಗೂ ಇಬ್ಬರು ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಸದರಿ ನನ್ನ ತಾತನ ಎಲ್ಲಾ ಮಕ್ಕಳು ಮರಣ ಹೊಂದಿರುತ್ತಾರೆ. ಕೆಂಪೇಗೌಡ ನಮ್ಮ ತಂದೆ ಮರಣ ಹೊಂದುವ 2 – 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಕೆಂಪೇಗೌಡನ ಹೆಂಡತಿ ಹೆಸರು ಪುಟ್ಟಮಾರಮ್ಮ. ಕೆಂಪೇಗೌಡನಿಗೆ 7 ಜನ ಮಕ್ಕಳಿರುತ್ತಾರೆ ಅವರೆಂದರೆ ಪುಟ್ಟಸ್ವಾಮಿ, ಕೆ ಜಯರಾಮ್ 2 ನೇ ಪ್ರತಿವಾದಿಯ ಗಂಡ, ನಾಗರಾಜು, ಶಿವಲಿಂಗಯ್ಯ, ಕೃಷ್ಣ, ಬಸವರಾಜು ಈಗ ಮರಣ ಹೊಂದಿರುತ್ತಾರೆ ಮತ್ತು ಗೌರಮ್ಮ. ಸಾಕ್ಷಿ ಮುಂದುವರೆದು ಕೆ ಜಯರಾಮ್ ಬೆಂಗಳೂರಿನಲ್ಲಿ ವ್ಯಾಪಾರ ಮಾಡಿಕೊಂಡಿದ್ದರು ಮತ್ತು ಊರಿಗೆ ಆಗಾಗ ಬರುತ್ತಿದ್ದರು. ನನ್ನ ತಂದೆ ಹಾಗೂ ಸಹೋದರರು ವಿಭಾಗವಾಗಿದ್ದರು. ವಿಭಾಗವಾದ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಸಹೋದರರು ವಿಭಾಗದ ಪ್ರಕಾರ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆಂದರೆ ಇರಬಹುದು. ಸದರಿ ವಿಭಾಗದಲ್ಲಿ ಕೆಂಪೇಗೌಡನಿಗೂ ಸಹ ಆಸ್ತಿಗಳು ಬಂದಿದ್ದವು ಎಂದರೆ ಸರಿ. ನನ್ನ ಚಿಕ್ಕಪ್ಪ ಕೆಂಪೇಗೌಡನಿಗೆ 2 ಸರ್ವೆ ನಂಬರ್ ಗಳಲ್ಲಿ 1 ಗುಂಟೆ ನಿವೇಶನ ಮತ್ತು 32 ಗುಂಟೆ ಇನ್ನೊಂದು ಜಮೀನು ವಿಭಾಗದಲ್ಲಿ ಕೊಟ್ಟಿರುತ್ತಾರೆ. ಕೆಂಪೇಗೌಡ ಬದುಕಿದ್ದಾಗಲೇ ಎರಡು ಆಸ್ತಿಗಳು ಅವರಿಗೆ ಕೊಟ್ಟು ಖಾತೆ ಕೂಡ ಆಗಿದ್ದವು. ಸದರಿ ಎರಡು ಆಸ್ತಿಗಳನ್ನು ಸುಮಾರು 30 ವರ್ಷಗಳ ಹಿಂದೆಯೇ ಕೊಡಲಾಗಿತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ವಿಭಾಗದಲ್ಲಿ ಯಾವ್ಯಾವ

ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿದೆ ಎಂದರೆ ಸರಿ. ಸರ್ವೆ ನಂ.7/4 ರಲ್ಲಿ 18 ಗುಂಟೆ ನನ್ನ ತಂದೆಗೆ ವಿಭಾಗದಲ್ಲಿ ಬಂದಿತ್ತು. ಸರ್ವೆ ನಂ.7/5 ರಲ್ಲಿ 17 ಗುಂಟೆ ನನ್ನ ತಂದೆ ನನ್ನ ದೊಡ್ಡಪ್ಪ ಎತ್ತೇಗೌಡನಿಂದ ಖರೀದಿ ಮಾಡಿರುತ್ತಾರೆ. ಎತ್ತೇಗೌಡನಿಗೆ ಸರ್ವೆ ನಂ.7/5 ರಲ್ಲಿ 17 ಗುಂಟೆ ವಿಭಾಗದಲ್ಲಿ ಬಂದಿರುತ್ತದೆ. ನನ್ನ ತಂದೆ 1947-48 ರಲ್ಲಿ ಸದರಿ ಸರ್ವೆ ನಂ.7/5 ನ್ನು ಖರೀದಿ ಮಾಡಿರುತ್ತಾರೆ. ನಮ್ಮ ತಂದೆ ಯಾವ ವರ್ಷದಲ್ಲಿ ಅಥವಾ ಎಷ್ಟು ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಂದೆ ಹೆಸರಿಗೆ ಯಾವ ವರ್ಷ ಖಾತೆ ದಾಖಲಾಗಿರುತ್ತದೆ ಗೊತಿಲ್ಲ. ನನ್ನ ತಂದೆ ಸರ್ವೆ ನಂ.18 ರಲ್ಲಿ 1 ಎಕರೆ 17 ಗುಂಟೆ ನನ್ನ ತಂದೆ ಖರೀದಿ ಮಾಡಿರುತ್ತಾರೆ. ಸರ್ವೆ ನಂ.7/4 ಹೊರತು ಪಡಿಸಿ ನನ್ನ ತಂದೆಗೆ ಯಾವುದೇ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುವುದಿಲ್ಲ. ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ. ಸರ್ವೆ ನಂ.18 ನ್ನು ನನ್ನ ಇಬ್ಬರು ಸಹೋದರರಿಗೆ ವಿಭಾಗದಲ್ಲಿ ಕೊಟ್ಟಿರುತ್ತೇನೆ. ಸರ್ವೆ ನಂ.7/4 ಮತ್ತು 7/5 ನಾನು ವಿಭಾಗದಲ್ಲಿ ತೆಗೆದುಕೊಂಡಿರುತ್ತೇನೆ. ಸದರಿ ವಿಭಾಗವನ್ನು ನಾವುಗಳು ಬರವಣಿಗೆ ಮೂಲಕ ಮಾಡಿಕೊಂಡಿರುತ್ತೇವೆ ಆದರೆ ನೋಂದಣಿ ಮಾಡಿಸಿರುವುದಿಲ್ಲ. ಸದರಿ ವಿಭಾಗದ ಪ್ರಕಾರ ನಾವೆಲ್ಲರೂ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ. 1998-99 ರ ಸಾಲಿನಲ್ಲಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ